# ತ್ಯಾಜ್ಯ ವಸ್ತುಗಳೊಂದಿಗೆ ಬಂಧನ

ಸಂಗ್ರಹ : ಸುನಯನ ವಾಲ್ಟರ್ಸ್

ನಿಪುಣ ಕೆಲಸಗಾರನಾದ ಜೋನ್‌ಗೆ ಒಂದು ಗರಾಜ್ ಶುದ್ಧಮಾಡುವ ಕೆಲಸವು ಕೊಡಲ್ಪಟ್ಟಿತು. ಅಲ್ಲಿ ಹಳೆ ವಸ್ತುಗಳು ಒತ್ತೊತ್ತಾಗಿ ತುಂಬಿಕೊಂಡಿದ್ದವು. ಅವುಗಳನ್ನು ವರ್ಗೀಕರಿಸಿ, ಯಜಮಾನನಿಗೆ ಬೇಕಾದ ಸಾಮಾನುಗಳನ್ನು ಇರಿಸಿಕೊಂಡು, ಉಳಿದವುಗಳಲ್ಲಿ ತನಗೆ ಬೇಕಾದುದನ್ನು ಜೋನ್‌ಗೆ ತೆಗೆದುಕೊಳ್ಳಲು ಹೇಳಲಾಗಿತ್ತು. ಬೇಡವಾದ ಉಳಿದ ಸಾಮಾನುಗಳನ್ನು ತ್ಯಾಜ್ಯ ವಸ್ತುಗಳ ತಾಣಕ್ಕೆ ಒಯ್ದು ಹಾಕಬೇಕಾಗಿತ್ತು.

ಜೋನ್, ಯಜಮಾನಿಗೆ ಬೇಕಾಗಿದ್ದ ವಸ್ತುಗಳನ್ನು ವರ್ಗೀಕರಿಸಿದನು. ಅವುಗಳನ್ನು ಕ್ರಮಬದ್ಧವಾಗಿ ಬೇಕಾದಾಗ ಕಂಡುಕೊಳ್ಳುವಂತೆ ಜೋಡಿಸಿ ಇಟ್ಟನು. ತ್ಯಾಜ್ಯ ವಸ್ತುಗಳ ದೊಡ್ಡ ಸಂಗ್ರಹವನ್ನು ಪಟ್ಟಣದ ತ್ಯಾಜ್ಯ ವಿಸರ್ಜನಾ ಜಾಗಕ್ಕೆ ಒಯ್ಯಬೇಕಾಗಿತ್ತು. ಜೋನ್‌ಗೆ ತನ್ನೊಬ್ಬನಿಂದ ಅದು ಅಸಾಧ್ಯವೆಂದು ಕಂಡಾಗ ಸ್ನೇಹಿತ 'ಬೆನ್'ನನ್ನು ಸಹಾಯಕ್ಕಾಗಿ ಕರೆದುಕೊಂಡನು.

ಎಲ್ಲವನ್ನೂ ದೊಡ್ಡ ಟ್ರಕ್‌ನಲ್ಲಿ ತುಂಬಿಸಿ ಪಟ್ಟಣದ ಹೊರಗೆ ಒಯ್ದರು. ಒಳಗೆ ಹೋಗಲು ಪರವಾನಗಿ ಪತ್ರ ತೆಗೆದುಕೊಂಡಾಗ ಅವರಿಗಾಗಿ ಪ್ರವೇಶದ್ವಾರವನ್ನು ತೆರೆಯಲಾಯಿತು. ಬಹಳ ಕಡಿಮೆ ಸಮಯ ಉಳಿದಿತ್ತು. ಹಾಗಾಗಿ ತ್ವರೆ ಮಾಡಬೇಕಾಗಿತ್ತು.

"ಇದನ್ನು ಎಸೆ..... ಇದು ಇರಲಿ...... ಇನ್ನೂ ಉಪಯೋಗಕ್ಕೆ ಬರುವಂತಿದೆ".... ಅವುಗಳನ್ನು ಪರೀಕ್ಷಿಸಿ ವರ್ಗೀಕರಿಸುತ್ತಾ ಸಮಯ ಕಳೆದುದು ತಿಳಿಯಲೇ ಇಲ್ಲ. ಕೊನೆಗೂ ಬಹಳಷ್ಟು ವಸ್ತುಗಳನ್ನು ಜೋಡಿಸಿಟ್ಟು, ತ್ಯಾಜ್ಯ ವಸ್ತುಗಳನ್ನು ವಿಸರ್ಜಿಸಿದರು. ಅಲ್ಲಿದ್ದ ಪುಟ್ಟ ಗುಡ್ಡ ಸುತ್ತಿ ಹಿಂತೆರಳಲು ದ್ವಾರದ ಬಳಿಗೆ ಬಂದಾಗ, ಅಲ್ಲಿದ್ದ ಕಛೇರಿಯ ಕೋಣೆ ಮುಚ್ಚಿತ್ತು. ದಾರಿಯಲ್ಲಿದ್ದ ಮುಖ್ಯ ದ್ವಾರಕ್ಕೆ ದಪ್ಪನೆಯ ಸರಪಳಿ ಬಿಗಿದು ದೊಡ್ಡ ಬೀಗ ಹಾಕಲಾಗಿತ್ತು.

ಓ! ಎಂತಹ ಅನಾನುಕೂಲಕರ ಪ್ರಸಂಗ! ಆಗಲೇ ಕತ್ತಲಾಗಿತ್ತು. ಅಷ್ಟರಲ್ಲಿ ಎದುರಿನ ದಾರಿಯಲ್ಲಿ ದಾಟಿ ಹೋಗುತ್ತಿದ್ದ ಮಹಿಳೆಯೊಬ್ಬಳನ್ನು ಕೈ ಬೀಸಿ ಕರೆದು ನಿಲ್ಲಿಸಿದ ಅವರು ಸಹಾಯಕ್ಕಾಗಿ ಕೇಳಿಕೊಂಡರು.

ಆಗ ಬೆನ್ ಮತ್ತು ಜೋನ್‌ಗೆ ತಮ್ಮ ಅಮೂಲ್ಯವೆಂದುಕೊಂಡ ವಸ್ತುಗಳ ಸಂಗ್ರಹದ ಯೋಚನೆ ಕಿಂಚಿತ್ತಾದರೂ ಇತ್ತೆಂದು ತಿಳಿಯುವಿರಾ? ಇಲ್ಲ! ಅವರು ಬಿಡುಗಡೆ ಹೊಂದಲು ಬಯಸಿದರು! ಲೋಕದ ಆಕರ್ಷಣೆಗಳಲ್ಲಿ ವ್ಯಸ್ತರಾದ ಎಷ್ಟೊಂದು ಯುವಕ, ಯುವತಿಯರಿಗೆ, ಪ್ರೌಢರಿಗೂ ಕೂಡಾ ಅಮೂಲ್ಯ ಸಮಯದ ಪರಿವೆಯೇ ಇರುವುದಿಲ್ಲ! ನಮ್ಮ ಜೀವನ ಚಿತ್ರಣವೂ ಹೀಗೆ ಇದೆಯೋ? ಸಮಯ ಓಡುತ್ತಿದೆ! ಸ್ವರ್ಗದ ಬಾಗಿಲು ಮುಚ್ಚಲ್ಪಡುತ್ತದೆ! ಆಗ ನಾವು ಎಲ್ಲಿರುತ್ತೇವೆ?

ಕೊನೆಗೂ ಆ ಕಛೇರಿಯ ಮುಖ್ಯಸ್ಥನು ಬಂದನು. ಅವರ ಕಾಗದ ಪತ್ರಗಳನ್ನೆಲ್ಲಾ ಪರಿಶೀಲಿಸಿದನು. ಆದರೆ ದ್ವಾರಪಾಲಕನಿಗೆ ಕರೆ ಮಾಡಿದಾಗ ಅವನು ಸ್ವೀಕರಿಸಲಿಲ್ಲ. ಕೊನೆಗೆ ಅವನು ಹೇಳಿದನು. ನಿಮ್ಮ ಟ್ರಕ್ ಮತ್ತು ವಸ್ತುಗಳನ್ನು ಇಲ್ಲಿಯೇ ಬಿಟ್ಟು ನೀವು ಹೊರಗೆ ಬನ್ನಿರಿ.

ಆ ದ್ವಾರಪಾಲಕನು ಇಬ್ಬರನ್ನು ಮರೆತು ಮನೆಗೆ

ಹೋದಂತೆ, ನಿಮ್ಮ ಸ್ನೇಹಿತರೂ ನಿಮ್ಮನ್ನು ಮರೆತು, ತಮ್ಮ ಹಿತವನ್ನೇ ಯೋಚಿಸುತ್ತಾ ತಮ್ಮ ದಾರಿ ಹಿಡಿದು ಹೋಗಬಹುದು. ನೀವು ಈ ಜಗತ್ತಿನ ತ್ಯಾಜ್ಯಗಳೊಂದಿಗೆ ಬಂಧಿಂಯಾಗಿದ್ದು, ನಿಮ್ಮ ಉಳಿದ ಜೀವನ ಕಳೆಯಬೇಕಾಗಬಹುದು. ಆದರೆ ನೆನಪಿರಲಿ! ಪರಲೋಕದ ಬಾಗಿಲು ಬೇಗನೇ ನಿತ್ಯವಾಗಿ ಮುಚ್ಚಲ್ಪಡುವುದು.!

*"ಅವರು ಕೊಂಡುಕೊಳ್ಳಲಿಕ್ಕೆ ಹೋದಾಗ ಮದಲಿಂಗನು ಬಂದನು. ಸಿದ್ಧವಾಗಿದ್ದವರು ಅವನ ಸಂಗಡ ಮದುವೆಯ ಮನೆಯೊಳಕ್ಕೆ ಹೋದರು. ಬಾಗಿಲು ಮುಚ್ಚಲಾಯಿತು. ತರುವಾಯ ಉಳಿದವರೂ ಸಹ ಬಂದು, ಸ್ವಾಮೀ, ನಮಗೆ ತೆರೆಯಿರಿ ಅಂದರು. ಆತನು – ನಿಮ್ಮನ್ನು ನಾನರಿಯೆನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು"* (ಮತ್ತಾಯ 25:1012).

ಕೊನೆಗೂ ಜೋನ್ ಮತ್ತು ಬೆನ್ ಏನು ಮಾಡಿದರು? ತಮ್ಮ ಎಲ್ಲಾ ಸೊತ್ತುಗಳನ್ನು ಅಲ್ಲೇ ಬಿಟ್ಟು ಗೋಡೆಯ ಮೇಲೆ ಹತ್ತಿ ನಡೆದು ಮನೆ ಸೇರಿಕೊಂಡರು. ನೀವು ಯೇಸು ಕ್ರಿಸ್ತನವರಾಗಿದ್ದರೆ ನಿಮಗೂ ದಾರಿ ಇದೆ. ಆತನನ್ನು ನಂಬಿದವರು ತಮ್ಮ ಪಾಪಗಳನ್ನೆಲ್ಲಾ ತೊಳೆದುಕೊಂಡು, ಲೋಕದವುಗಳನ್ನೆಲ್ಲಾ ಹಿಂದೆ ಬಿಟ್ಟು ಆತನ ಹಿಂದೆ ಹೋಗಬೇಕು.

ಪಾಪಪೂರ್ಣವಾದ ಈ ಜಗತ್ತಿನಲ್ಲಿ ನಾವು ನಮ್ಮ ಪಾಪಗಳಿಂದ ಇನ್ನೂ ಬಂಧಿತರಾಗಿದ್ದರೆ, ಪರಲೋಕದ ಬಾಗಿಲು ಮುಚ್ಚುವ ಮೊದಲೇ ರಕ್ಷಣೆಗಾಗಿ ತೆರೆದ ಬಾಗಿಲಿನ ಕಡೆಗೆ ಓಟ ಓಡೋಣ. ಆಗ ನಾವೂ ಹೇಳಬಹುದು – *"ಯೇಸುವು ನಮ್ಮನ್ನು ಕೆಟ್ಟದ್ದಾಗಿರುವ ಈಗಿನ ದುಷ್ಟ ಯುಗದೊಳಗಿನಿಂದ ಬಿಡಿಸಬೇಕೆಂದು ನಮ್ಮ ತಂದೆಯಾದ ದೇವರ ಚಿತ್ತಕ್ಕೆ ಅನುಸಾರವಾಗಿ ನಮ್ಮ ಪಾಪಗಳ ದೆಸೆಯಿಂದ ತನ್ನನ್ನು ಮರಣಕ್ಕೆ ಒಪ್ಪಿಸಿಕೊಂಡನು"* (ಗಲಾತ್ಯ 1:3–4)

*"ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳುವುದು ಹೇಗೆ?"* (ಇಬ್ರಿಯ 2:3) ■

## ತಡಮಾಡುವುದು ಅತೀ ಭಯಂಕರವಾದ ಅಪಾಯ

ನಾಳೆ, ಮುಂದಿನವಾರ, ಮುಂದಿನ ವರ್ಷ ಎನ್ನುತ್ತಾ ದಿನ ದೂಡುವುದು ಕ್ರಿಸ್ತೀಯ ಬೆಳವಣಿಗೆಯ ಅತೀ ದೊಡ್ಡ ಕಳ್ಳತನವಾಗಿದೆ. ಕ್ರಿಸ್ತನ ಕರೆ ಕೇಳಿದ ಕೂಡಲೇ ಕಾರ್ಯವೆಸಗಬೇಕಾಗಿದೆ. ತಡವಾಗುವುದು ಎಂದರೆ, ಒಬ್ಬನು ದಾರಿಬಿಟ್ಟು ಹೋಗುವುದೇ ಆಗಿದೆ.

ಲಂಡನಿನಲ್ಲಿ ಒಬ್ಬಾಕೆಯ ಆತ್ಮೀಯ ಪ್ರೌಢತೆಯ ಬೆಳವಣಿಗೆ ಅತೀ ಶೀಘ್ರವಾಗಿ ಆಗಿದ್ದನ್ನು ನೋಡಿ ಆಶ್ಚರ್ಯವಾಯಿತು. ಆಕೆ ಬಹು ಕೆಟ್ಟ ಸ್ವಭಾವದವಳೂ, ಪಾಪದ ಅಂಧಕಾರದಲ್ಲಿ ಜೀವಿಸಿದವಳೂ ಆಗಿದ್ದಳು. ಆದರೆ ಒಂದು ದಿನ ಕ್ರಿಸ್ತನನ್ನು ಸ್ವಂತ ರಕ್ಷಕನನ್ನಾಗಿ ಸ್ವೀಕರಿಸಿದಳು. ಒಂದು ವರ್ಷದ ಅವಧಿಯಲ್ಲಿ ಕ್ರೈಸ್ತ ಜೀವಿತದಲ್ಲಿ ಶೀಘ್ರವಾಗಿ ಬೆಳೆದು ಸೇವಾಕ್ಷೇತ್ರದ ಮುಖ್ಯಸ್ಥಳಾದಳು.

ಕೃಪೆಯಲ್ಲಿ ಇಷ್ಟು ಶೀಘ್ರವಾಗಿ ಬೆಳೆದುದರ ರಹಸ್ಯವೇನೆಂದು ಕೇಳಿದಾಗ, ಆಕೆಯು ಎರಡು ಶಬ್ದಗಳಲ್ಲಿ ಉತ್ತರಿಸಿದಳು. "ತಕ್ಷಣದ ವಿಧೇಯತೆ". ಇದೇ ಆಕೆಯ ರಹಸ್ಯ. ತಕ್ಷಣದ ವಿಧೇಯತೆಗೆ ಬೇರಾವ ಪರ್ಯಾಯವೂ ಇಲ್ಲ. (ಶಿಲುಬೆಯ ಕರೆಗೆ)

ನಮಗೆ ಸೇವೆ ಮಾಡಲು ಅವಕಾಶಕೊಟ್ಟವನು ಕರ್ತಾಧಿಕರ್ತನೂ, ರಾಜಾಧಿರಾಜನೂ ಎಂಬ ಅರಿವು ನಮಗೆ ಬಂದರೆ ನಾವು ಆತನ ಕರೆಗೆ ಕಿವಿಗೊಟ್ಟು ಆತನನ್ನು ಸೇವಿಸುತ್ತೇವೆ. ಮತ್ತು ಆತನ ಹಾಗೆ ಇರಲು ಇಚ್ಛಿಸುತ್ತೇವೆಯೇ ಹೊರತು ಹಿಂಜರಿಯುವುದಿಲ್ಲ. ಆತನು ಮಾಡಿದ ಹಾಗೆ ಶಿಲುಬೆಯನ್ನು ಅಪ್ಪಿಕೊಂಡರೆ, ನಾವು ಆತನ ಮದಲಗಿತ್ತಿಯಾಗಿ ಆತನ ಸಿಂಹಾಸನದಲ್ಲಿ ನಿರಂತರವೂ ಭಾಗಿಯಾಗಲು ಅರ್ಹರಾಗುತ್ತೇವೆ. ನಾವು ಬರೇ ಕ್ರಮುದಂತೆಂಯಾಗಲೀ, ಸಂಘಟನೆಯ ರೂಪದಲ್ಲಿಯಾಗಲೀ ಬಾರದೆ ವ್ಯಕ್ತಿಗತವಾಗಿ, ನಮಗಾಗಿ ತನ್ನನ್ನೇ ಅರ್ಪಿಸಿಕೊಂಡ ಯೇಸುವಿನಂತೆ ನಮ್ಮನ್ನು ನಾವು ಆತನಿಗೆ ಸಮರ್ಪಿಸಿಕೊಳ್ಳಬೇಕು. □